## 25

# ನಂಬಿಕೆಯ ಮೂಲಕ ಜಯ
## (11:30-40)

ನಿರಾಸೆ, ಜಿಗುಪ್ಸೆ, ಭಿನ್ನಾಭಿಪ್ರಾಯಗಳು ಹಾಗು ಧರ್ಮ ಭ್ರಷ್ಟತೆಯ ಹಂತದಲ್ಲಿದ್ದ ಇಬ್ರಿಯರಿಗೆ ಈ ಪತ್ರಿಕೆಯನ್ನು ಬರೆಯಲಾಯಿತು. ಇಬ್ರಿಯ 11ರಲ್ಲಿ ನಮೂದಿಸಿರುವ *ನಂಬಿಕೆಯು* ಅವರಿಗೆ ಅಗತ್ಯವಿತ್ತು ಎಂಬದನ್ನು ಅವರು ಅರಿಯಬೇಕಿತ್ತು. 30ನೇ ಅಧ್ಯಾಯದ ಅಂತ್ಯದ ವಚನದಿಂದ ಈ ಅಧ್ಯಯನ ಅರಂಭವಾಗುತ್ತದೇ. ಅದನ್ನು ನಾನು ನಂಬಿಕೆಯ ಮೂಲಕ ಜಯ ಎಂದು ಕರೆಯುತ್ತೇನೆ. ಇದರೊಂದಿಗೆ ಈ ಪುಸ್ತಕದ ಅಂತಿಮ ಕರೆಗೆ ಸಾಗುತ್ತೇವೆ.

### ... ನಂಬಿಕೆಯ ನಾಯಕರುಗಳು ...

**ಯೆರಿಕೋವಿನ ಗೋಡೆಗಳು (11:30)**

ನಂಬಿಕೆಯ ಕುರಿತ ಎರಡು ಪ್ರಮುಖ ನಿದರ್ಶನಗಳು ಇಲ್ಲಿ ಅಡಕವಾಗಿವೆ. ಮೊದಲನೆಯದಾಗಿ ಯೆರಿಕೋ ಗೋಡೆ ಕೆಡವಲ್ಪಟ್ಟಿತು. 30ನೇ ವಚನದ ಚಿತ್ರಣಗಳಿಂದ ಅವರಿಗೆ ಯೆಹೊದ್ಯರ ಇತಿಹಾಸದ ನೆನಪಾಯಿತು. ಗೋಡೆಯನ್ನು ಕೆಡವಿದ ಮೂಲಕ (ಯೆಹೋಶುವ 6:2-5) ಅವರು ದೇವರ ಮಾರ್ಗದರ್ಶನವನ್ನು ನಂಬಿಕೆಯಿಂದ ಅನುಸರಿಸಿದರು.

**ರಾಹಾಬಳು (11:31)**

ರಾಹಾಬಳ ಎರಡನೆಯ ನಿದರ್ಶನ (ಯೆಹೋಶುವ 2:9 -11). ಇದು ಅಸಹಜವಾದ ನಿದರ್ಶನವಾಗಿದೆ: ರಾಹಾಬಳು ಸ್ತ್ರೀಯಾಗಿದ್ದಳು.[1] ... ಅನ್ಯ ಸ್ತ್ರೀಯಾಗಿದ್ದಳು ... ಭಕ್ತಿಹೀನಳಾಗಿದ್ದಳು. ಆಕೆಯ ಹೆಸರನ್ನು ಏಕೆ ತಿಳಿಸಲಾಗಿದೇ? ಏಕೆಂದರೆ ಆಕೆ ನಂಬಿಕೆಯ ಮೂಲಕ ಜಯ ಹೊಂದಿದ್ದಳು (ಯೆಹೋಶುವ 2:4-21). ಆಕೆ ನಾಶನದ ಮೆಲೆ ಜಯಿಸಿದಳು (ಯೆಹೋಶುವ 6:22-25) ಎಲ್ಲಕ್ಕಿಂತ ಮಿಗಿಲಾಗಿ, ಆಕೆಯು ತನ್ನ ಅನ್ಯ ಸಂಸ್ಕೃತಿಯ ಮೇಲೆ ಜಯ ಸಾಧಿಸಿದ್ದಳು (ಮತ್ತಾಯ 1:5ನ್ನು ನೋಡಿ).

### ... ಯಾರು ಜಯ ಹೊಂದಿದರು ...
### (11:32-36)

**ನಂಬಿಕೆಯ ಇತರ ನಿದರ್ಶನಗಳು (11:32, 35, 36)**

ವಚನ 32ರಲ್ಲಿ *ನಂಬಿಕೆಯ ಮೂಲಕ ಜಯ ಹೊಂದಿದ* ಇತರರನ್ನು ತಿಳಿಸಲಾಗಿದೆ. ಇವರಲ್ಲಿ ಒಬ್ಬೊಬ್ಬರು ನಂಬಿಕೆಯ ಮೂಲಕ ಜಯ ಹೊಂದಿದರು.

ಗಿದ್ಯೋನ್: ದೇವರ ನಂಬಿಕೆಯ ಯೋಜನೆಯಲ್ಲಿ 300 ಜನ ಇಸ್ರಾಯೇಲ್ ಸೈನಿಕರು, ಮಿದ್ಯಾನ್ಯರನ್ನು ಜಯಿಸಿದ್ದರು (ನ್ಯಾಯಸ್ಥಾಪಕರು 7).

ಬಾರಾಕ್: ಇಸ್ರಾಯೆಲ್ಯರ ದೇವರ ನಂಬಿಕೆಯ ಮೂಲಕ ಅಶ್ಶೂರ್ಯರು ಅಪಜಯ ಹೊಂದಿದರು (ನ್ಯಾಯಸ್ಥಾಪಕರು 4).

ಸಂಸೋನ: (ನ್ಯಾಯಸ್ಥಾಪಕರು 13-16): ದೇವ ನಂಬಿಕೆಯಿಂದ ಅವನು ಫಿಲಿಷ್ಟಿಯರ ಮೇಲೆ ಬಲವನ್ನು ನಿರೂಪಿಸಿದನು.

ಯೆಪ್ತಾಹನು: ದೇವರು ಮಕ್ಕಳಿಗಾಗಿ, ಅಮ್ಮೋನಿಯರನ್ನು ಜಯಿಸಿದರು (ನ್ಯಾಯಸ್ಥಾಪಕರು 11).

ದಾವೀದ: ಪರಿಪೂರ್ಣನಲ್ಲದಿದ್ದರೂ, ನಂಬಿಕೆಯ ವ್ಯಕ್ತಿಯಾಗಿದ್ದನು (ಕೀರ್ತನೆ 23 ನೋಡಿರಿ).

ಸಮುವೇಲನು: (1 ಸಮೂವೇಲನು); ಹಳೆ ಒಡಂಬಡಿಕೆಯ ಒಬ್ಬ ಮಹಾಭಕ್ತ ಮಹಾ ನಂಬಿಕೆಯ ವ್ಯಕ್ತಿಯಾಗಿದ್ದನು.

ಪ್ರವಾದಿಗಳು: ಯೆಶಾಯ, ದಾನಿಯೋಲ, ಯೆರೆಮೀಯ, ಜೆಕರ್ಯ, ಎಲೀಯ, ಮತ್ತು ಎಲೀಷ,

ಅಂತ್ಯದಲ್ಲಿ, "ಕೆಲವರು" ಎಂದು ನಮೂದಿಸಿದೆ (ವಚನಗಳು 35, 36),[2] ನಾಯಕರನ್ನು ಹೊಂದಿರುವದು ಪ್ರಾಮುಖ್ಯವಾಗಿದೆ. ನಿಮ್ಮ ನಾಯಕರು ಯಾರು?

**ಜಯದ ನಿದರ್ಶನಗಳು (11:33-35ಎ)**

ನಂಬಿಕೆಯಿಂದ ಜಯ ಹೊಂದಿದವರ ಕುರಿತು ಮುಂದುವರೆಸಲಾಗಿದೆ.

"ನಂಬಿಕೆಯಿಂದ ರಾಜ್ಯಗಳನ್ನು ಗೆದ್ದರು": ದಾವೀದನು ಫಿಲಿಷ್ಟಿಯರನ್ನು ಸೋಲಿಸಿದನು; ಗಿದ್ಯೋನನು ಮಿದ್ಯಾನಿಯರನ್ನು ಸೋಲಿಸಿದನು.

"ನೀತಿಯ ಕಾರ್ಯಗಳನ್ನು ಮಾಡಿದರು (ನ್ಯಾಯ)": ಅವರು ನೀತಿ ಕಾರ್ಯಗಳನ್ನು ಮಾಡಿದ ನ್ಯಾಯದೀಶರಾಗಿದ್ದರು.

"ಅವರು ವಾಗ್ದಾನಗಳನ್ನು ಹೊಂದಿದರು": ಮೆಸ್ಸಿಯನ ವಾಗ್ದಾನವು, ದಾವೀದನಲ್ಲಿ ನೆರವೇರಿತು (2 ಸಮುವೇಲನು 17:12-16), ದಾನಿಯೇಲನಲ್ಲಿಯೂ ಅನೇಕ ವಾಗ್ದಾನಗಳು ನೆರವೇರಿದವು (ಯೆರೆಮೀಯನು ಪ್ರವಾದಿಸಿದಂತೆ ಎಪ್ಪತ್ತು ವರ್ಷಗಳ ಸೆರೆಯು ನೆರವೇರಿತು).

"ಸಿಂಹದ ಬಾಯಿಗಳನ್ನು ಕಟ್ಟಿದರು": ದಾವೀದ ಮತ್ತು ಸಂಸೋನರು ಸಿಂಹಗಳನ್ನು ಕೊಂದರು, ದಾನಿಯೋಲನ ಕುರಿತು ವಿಶೇಷವಾದ ವರದಿಯಿದೆ (ದಾನಿಯೇಲನು 6;23).

"ಬೆಂಕಿಯನ್ನು ಆರಿಸಿದರು": ಇಬ್ರಿಯರಾದ ಮೂರು ಯುವಕರು ಬೆಂಕಿಜ್ವಾಲೆಯಿಂದ ತಪ್ಪಿಸಿಕೊಂಡರು (ದಾನಿಯೇಲನು 3).

"ಕತ್ತಿಗಳಿಗೆ ತಪ್ಪಿಸಿಕೊಂಡರು": ದಾವೀದನು ಸೌಲನ ಕತ್ತಿಯಿಂದಲೂ; ಎಲೀಯನು ಅಹಾಬನ ಕತ್ತಿಯಿಂದಲೂ ತಪ್ಪಿಸಿಕೊಂಡರು.

"ಬಲಹೀನರು, ಬಲವುಳ್ಳವರಾದರು": ದಾವೀದನು ಕುರುಬನಾಗಿರುವಾಗ ಗೋಲ್ಯಾತನನ್ನು ಕೊಂದನು; ಗಿದ್ಯೋನನು ತನ್ನ ತಂದೆಗೆ ಅಲಕ್ಷ್ಯವಾಗಿದ್ದನು (ನ್ಯಾಯಸ್ಥಾಪಕರು 6:15).

"ಕೆಲವರು ಯುದ್ಧ ಶೂರರು, ಅನ್ಯಸೇನೆಗಳನ್ನು ಹಂತಗೊಳಿಸಿದರು": ಮಹಾಯುದ್ಧಗಳನ್ನು ಜಯಿಸಿದರು.

"ಸ್ತ್ರೀಯರು ತಮ್ಮ ಸತ್ತು ಹೋದ ಮಕ್ಕಳನ್ನು ಪುನರುತ್ಥಾನದಿಂದ ಹಿಂದಕ್ಕೆ ಪಡೆದರು": ಅದರಲ್ಲಿ ಚಾರೆಪ್ತಾ ವಿಧವೆ ಮತ್ತು ಶೂನೇಮ್ ಊರಿನ ಸ್ತ್ರೀಯರು ಇರುವರು.

ಯೂದ ಕ್ರೈಸ್ತರು ಸ್ಪಂದಿಸುವದನ್ನು ನಾನು ಯೋಚಿಸಬಲ್ಲೆ, "ಕ್ರೈಸ್ತವ್ಯವು ಒಂದು ಉಲ್ಲಾಸವನ್ನುಂಟು ಮಾಡುವದೆಂದು ಯೋಚಿಸಿದೆ-ಜಯದಿಂದ ಜಯಕ್ಕೆ - ಆದರೆ ಕಷ್ಟಗಳನ್ನು ಅನುಭವಿಸಿದ್ದರು!" ತಾಳಿ! ಈ ಚರ್ಚೆಯು ಮತ್ತೊಂದು ಸತ್ಯವನ್ನು ತಿಳಿಸುತ್ತೇನೆ.

## "... ಕಷ್ಟ ಸಂಕಟಗಳು ನಡುವೆಯೂ" (11:35ಬಿ-39ಎ)

**ವಿಪತ್ತುಗಳು**

35 ರಿಂದ 38ರ ವರೆಗಿನ ವಚನಗಳ ಪ್ರಕಾರ, "ಜಯವೆಂದರೆ" ತೊಂದರೆಗಳು ಇರುವುದಿಲ್ಲ ಎಂಬ ಅರ್ಥವಲ್ಲ. ವಿಪತ್ತುಗಳ ನಡುವೆಯೂ ಜನರು ಜಯ ಹೊಂದಿದರು ಎಂಬ ತಾತ್ಪರ್ಯವಾಗಿದೆ.

ಕೆಲವರು ವ್ಯಕ್ತಿಗತವಾಗಿ ಪುನರುತ್ಥಾನ ಹೊಂದಿದರು (ವಚನ 35ಎ), ಅವರು ಇಬ್ರಿಯ 11ರ ಜನರು ಇದನ್ನು ಹೊಂದಲಿಲ್ಲ. ಅವರಲ್ಲಿ ಕೆಲವರು "ಬಿಡುಗಡೆಯನ್ನು ಬಯಸಿದ ವಿಪತ್ತುಗಳನ್ನು" ಅನುಭವಿಸಿದರು. (ವಚನ 35ಬಿ); ಅವರು ನಂಬಿಕೆಯನ್ನು ಬಿಟ್ಟಿದ್ದರೆ ಬಿಡುಗಡೆ ಹೂಂದಿರುವರು. ದೇವರಿಗೆ ನಂಬಿಗಸ್ತರಾಗಿರುವದು ಜಯವಾಗಿದೆ, ಅವರು "ಉತ್ತಮವಾದ ಪುನರುತ್ಥಾನವನ್ನು ಹೊಂದುವ ಸಲುವಾಗಿ" ನಂಬಿಗಸ್ತರಾಗಿದ್ದರು (ವಚನ 35ಸಿ).

"ಇನ್ನು ಕೆಲವರು ಅಪಹಾಸ್ಯ ಕೊರಡೆಯ ಪೆಟ್ಟು, ಬೇಡಿ, ಸೆರೆಮನೆಗಳನ್ನು ಅನುಭವಿಸಿದರು" (ವಚನ 36); ಯೆರೆಮೀಯನು ಇದಕ್ಕೆ ನಿದರ್ಶನವಾಗಿರುವನು. ಕೆಲವರನ್ನು ಜನರು "ಕಲ್ಲೆಸೆದು ಕೊಂದರು" (ವಚನ 37ಎ), ಜೆಕರ್ಯನು ಈ ಶಿಕ್ಷೆ ಹೊಂದಿದನು. ಮರದ ದಿಮ್ಮಿಯೊಳಗೆ ಸೇರಿಸಿ, ನಂತರ ಗರಗಸದಿಂದ "ಅದನ್ನು ಎರಡು ಭಾಗ ಮಾಡಿದರು" (37ಬಿ); ಯೆಶಾಯನು, ಹೀಗೆ ಸತ್ತನೆಂದು ಸಂಪ್ರದಾಯ, ಹೇಳುತ್ತದೆ. "ಕೆಲವರನ್ನು ಶೋಧಿಸಿದರು" (ವಚನ 37ಸಿ) ಕೆಲವರು ಜೀವನ ಪೂರ್ತಿ ವಿಚಾರಣೆಗೆ ಒಳಗಾದರು. "ಕೆಲವರು ಕತ್ತಿಯ ಬಾಯಿಂದ ತಪ್ಪಿಸಿಕೊಂಡರು" (ವಚನ 34); "ಕೆಲವರನ್ನು ಕೊಂದರು" (ವಚನ 37ಡಿ). "ಕೆಲವರು ಕೊರತೆ, ಹಿಂಸೆ, ಬಾಧೆಗಳನ್ನು ಹೊಂದಿದರು" (ವಚನ 37ಇ), ಕೆಲವರು "ಅಲೆಯುವವರಾದರು" (38ಬಿ) ಇಂಥವರಿಗೆ "ಈ ಲೋಕವು ಯೋಗ್ಯ ಸ್ಥಳವಲ್ಲ" (ವಚನ 38ಎ)!

**ಜಯ!**

ಈ ಜನರು ಜಯ ಹೊಂದಿದವರೇ? ವಚನ 39ರಲ್ಲಿ, ಇವರೆಲ್ಲರೂ "ನಂಬಿಕೆಯ ಮೂಲಕ ಒಳ್ಳೆ ಹೆಸರನ್ನು ಪಡೆದರು." ಇವರು *ದೇವರಿಂದ ಮೆಚ್ಚಿಗೆಯನ್ನು* ಹೊಂದಿದರು. ಇದಕ್ಕಿಂತಲೂ ಉತ್ತಮವಾದ ಜಯ ಇನ್ನೊಂದಿರುವದಿಲ್ಲ!

## ನಾವುಗಳು ಸಹ ಹೊಂದಬಹುದು ... (11:39ಬಿ, 40)

ಬರಹಾಗಾರನು ಈ ಸಂಗತಿಗಳನ್ನು ವರ್ಗಾಯಿಸುತ್ತಿರುವನು. ಅವನು ಓದುಗರು ಸಹ ಅವರ ನಂಬಿಕೆಯಲ್ಲಿ ಪಾಲುದಾರರು ಎಂದು ಹೇಳಬಯಿಸಿದನು. ವಿಪತ್ತುಗಳ ನಡುವೆ ಜಯ ಸಾಧಿಸಬಹುದಾಗಿದೆ. ಇದನ್ನು ವೈಯಕ್ತಿಕವಾಗಿ ಅನ್ವಯಿಸಿಕೊಳ್ಳಲು ನಾನು ಹೀಗೆ ಹೇಳಬಯಸುವನು: ನಾವು ಸಹ ಸಂಕಟಗಳ ನಡುವೆ ಜಯ ಹೊಂದಿ ನಂಬಿಕೆಯ ನಾಯಕ ರಾಗಿರಬಹುದು. ಯಾಕೆಂದರೆ?

(1) ಯಾಕೆಂದರೆ ವಾಗ್ದಾನಗಳನ್ನು ನಾವುಗಳು ಸಹ ಸ್ವೀಕರಿಸಿದ್ದೇವೆ ಆದರೆ ಹಳೆ ಒಡಂಬಡಿಕೆಯ ನಂಬಿಗಸ್ತರು ವಾಗ್ದಾನದ ಫಲಗಳನ್ನು ಅನುಭವಿಸಲಿಲ್ಲ (ವಚನ 39ಬಿ) ಅವರು ಬರಬೇಕಾದ ಮೆಸ್ಸಿಯನಾದ ಯೇಸು ಕ್ರಿಸ್ತನನ್ನು ನೋಡಲಿಲ್ಲ ಅದರೆ ಇಬ್ರಿಯರು ಆ ಬೋಧನೆಯನ್ನು ಹೊಂದಿದಂತೆ ನಾವುಗಳು ಸಹ ಹೊಂದಿದ್ದೇವೆ.

(2) ನಾವು "ಉತ್ತಮವಾದದ್ದನ್ನು" ಪಡೆದಿದ್ದೇವೆ (ವಚನ 40ಎ) ನಾವೇ ಉತ್ತಮವಾದ ಯಜ್ಞವನ್ನು, ಒಡಂಬಡಿಕೆಯನ್ನು ನಿರೀಕ್ಷೆಯನ್ನು ಹಾಗು ಇಬ್ರಿಯ

ಪತ್ರಿಕೆಯಲ್ಲಿರುವ "ಉತ್ತಮವಾದ" ವುಗಳೆಲ್ಲವನ್ನು ಹೊಂದಿದ್ದೇವೆ.

(3) ಯಾಕೆಂದರೆ ದೇವರು ಉದ್ದೇಶ ಹಾಗೂ ಯೋಜನೆಯಂತೆ, ಹಳೆ ಒಡಂಬಡಿಕೆಯ ನಂಬಿಗಸ್ತರೆಲ್ಲರು ವ್ಯರ್ಥವಾಗಿ ಮರಣ ಹೊಂದಿರಲಿಲ್ಲ. ವಚನ 40ರ ಅಂತ್ಯದಲ್ಲಿ "ನಾವಿಲ್ಲದೆ ಅವರು ಪೂರ್ಣವಾಗಲಿಲ್ಲ" ಎಂದಿದೆ. ಇದು ಅವರ ರಕ್ಷಣೆ ಕುರಿತು ಹೇಳದೆ ಅವರು ಪ್ರಾರಂಭಿಸಿದ ವಿಶ್ವಾಸವನ್ನು ಪೂರ್ಣಗೊಳಿಸಿದರು. ಈ "ಪರಿಪೂರ್ಣ" ಎಂಬುದು ಪೂರ್ಣಗೊಳಿಸಿದರು ಎಂದು ಅರ್ಥ.

ಮುಂದಿನ ಅಧ್ಯಾಯದ ಅರಂಭದಲ್ಲಿ ಒಂದು ಓಟಕ್ಕೆ ಹೋಲಿಸಲಾಗಿದೆ, ರಿಲೇ ಪಂದ್ಯವನ್ನು ನೆನಪಿಸಿಕೊಳ್ಳರಿ. ಇಬ್ರಿಯ 11ರ ನಂಬಿಗಸ್ತರು ಓಟವನ್ನು ಅರಂಭಿಸಿದರು, ಅದರ ಜಯದ ಧ್ವಜವನ್ನು ನಮಗೆ ನೀಡಿದ್ದಾರೆ, ಅದನ್ನು ಕಳಕೊಳ್ಳುವದು ಬೇಡ!

---

ಟಿಪ್ಪಣೆಗಳು

[1]ಇಬ್ರಿಯ 11ರಲ್ಲಿ ಇಬ್ಬರ ಸ್ತ್ರೀಯರ ಕುರಿತು ಪ್ರಸ್ಥಾಪಿಸಲಾಗಿದೆ. [2]ನಿಮ್ಮ ತರಗತಿಯಲ್ಲಿ ಇದ್ದವರನ್ನು ಹಳೆ ಒಡಂಬಡಿಕೆಯಲ್ಲಿರು ನಂಬಿಕೆಯ ನಾಯಕರನ್ನು ಯೋಚಿಸಿ ಹೇಳಿ ಎಂದು ಕೇಳಿರಿ.